ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ, ನ.ರಾ.ಪುರ.

ಸಿ.ಸಿ. ನಂ ಃ152/2026

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶರಲ್ ಸುಷ್ಮಾ ಡಿಸೋಜಾ | ಸಿ.ಡಬ್ಲ್ಯೂ - 01 |
| ತಂದೆಯ ಹೆಸರು | ಃ | ವಿಶಾಂತಿ ಡಿಸೋಜಾ | |
| ಗಂಡನ ಹೆಸರು | ಃ | ಲೇಟ್ ಜಕ್ಸನ್ ಪೆರೋರಾ | ಪಿ.ಡಬ್ಲ್ಯೂ - 01 |
| ವಯಸ್ಸು | ಃ | 30 ವರ್ಷ | |
| ಉದ್ಯೋಗ | ಃ | ಗೃಹಿಣಿ | |
| ವಾಸಸ್ಥಳ | ಃ | ಕಟ್ಟಿನ ಮನೆ, ಹರಾವರಿ ಗ್ರಾಮ ಎನ್.ಆರ್.ಪುರ ತಾಲೂಕು | |

ದಿನಾಂಕಃ 10.08.2026.ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಆರೋಪಿತರ ಪರಿಚಯ ಇರುತ್ತದೆ. ಚಾಸಾ- 2 ನನ್ನ ತಂದೆ ಚಾಸಾ- 5 ರಿಂದ ಚಾಸಾ-9 ರವರ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ಕೆಲವೊಂದು ದಾಖಲೆಗೆ ನನ್ನ ಸಹಿಯನ್ನು ಪಡೆದಿದ್ದು, ಸದರಿ ದಾಖಲೆಯಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಥಳ ಮಹಜರನ್ನು ಮಾಡಿರುವುದಿಲ್ಲ ಹಾಗೂ ಯಾವ ಕಾರಣಕ್ಕಾಗಿ ಪೊಲೀಸರು ಪೋಟೋ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಆಸ್ಪತ್ರೆಗೆ ಹೋಗಿ ಹಲ್ಲೆಯ ಸಂಬಂದ ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ಪೊಲೀಸರು ಯಾವುದೇ ನನ್ನ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

2. ನಾನು ನ್ಯಾಯಾಲಯದ ಮುಂದೆ ದಿಃ 05.01.2026 ರಂದು ಪೋಲಿಸರ ಕೋರಿಕೆಯ ಮೇರೆಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ಹಾಗೂ ಆರೋಪಿತರು ನನ್ನ ಮಾನಕ್ಕೆ ಕುಂದು ಬರುವ ರೀತಿ ನಡೆದುಕೊಂಡಿರುವುದಿಲ್ಲ.

3. ಸಾಕ್ಷಿಗೆ ದೂರನ್ನು ತೋರಿಸಲಾಗಿ ದೂರಿನಲ್ಲಿ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 17.12.2025 ರ ಕೃತ್ಯ ಸ್ಥಳ ಪಂಚನಾಮೆಯನ್ನು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪೋಟೋಗಳಲ್ಲಿ ತಮ್ಮ ಭಾವಚಿತ್ರವನ್ನು ಹಾಗೂ ಒಂದು ಸಿ.ಡಿ.ಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು ನಿಪಿ-5 ಎಂದು ಗುರುತಿಸಲಾಯ್ತು. ನಿಪಿ 3 ಮತ್ತು 4 ಅನ್ನು ಯಾವ ಕಾರಣಕ್ಕಾಗಿ

ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 1 ಮತ್ತು 2 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 16.12.2025 ರಂದು ಸಂಜೆ 4.50 ರ ಸುಮಾರಿಗೆ ಹರಾವರಿ ಗ್ರಾಮದಲ್ಲಿರುವ ಸಂತ ಯುದರ್ ಚರ್ಚ್ ನಲ್ಲಿ ತಾವು ತಮ್ಮ ಸಂಬಂಧಿಗಳಾದ ಚಾಸಾ-5 ಮತ್ತು ಚಾಸಾ-6 ರವರನ್ನು ಚರ್ಚ್ ನ ಕಾರ್ಯಕ್ರಮದಿಂದ 2 ಕುಟುಂಬಗಳನ್ನು ಚರ್ಚ್ ನ ಪಾಲನಾ ಸಮಿತಿಯವರು ಹಣಕಾಸಿನ ವಿಚಾರದಲ್ಲಿ ದೂರು ಇಟ್ಟಿದ್ದು ಆ ಬಗ್ಗೆ ತೀರ್ಮಾನ ಮಾಡಲು ಚಿಕ್ಕಮಗಳೂರು ಧರ್ಮ ಮುಖ್ಯ ಗುರುಗಳು ಅವರು ಸಹಾಯಕ ಗುರುಗಳಾದ ಚಾಸಾ-8 ಮತ್ತು ಚಾಸಾ-9 ರವರನ್ನು ಆ ದಿನ ಕಳುಹಿಸಿಕೊಟ್ಟಿದ್ದು ಆ ಸಭೆಗೆ ನಾನು, ನನ್ನ ತಂದೆ ಹಾಗೂ ನನ್ನ ಸಂಬಂಧಿಕರಾದ ಚಾಸಾ-5 ಮತ್ತು ಚಾಸಾ-6 ರವರು ಸಭೆಗೆ ಹೋದಾಗ ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ನಮ್ಮಗಳಿಗೆ ಅವ್ಯಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆಗ ಆರೋಪಿ 1 ರವರು ನನ್ನ ತಂದೆಗೆ ಬಲಗೆನ್ನೆಗೆ ಕೈಯಿಂದ ಹೊಡೆದಿದ್ದು ಆಗ ಚಾಸಾ-5 ಮತ್ತು ಚಾಸಾ-6 ರವರು ಸದರಿ ಜಗಳವನ್ನು ಬಿಡಿಸಿದರು ಎಂದರೆ ಸರಿಯಲ್ಲ. ನಂತರ ಧರ್ಮಗುರುಗಗಳು ಮನೆಯ ಒಳಗಡೆ ಸಭೆ ನಡೆಯುತ್ತಿದ್ದ ಜಾಗದಿಂದ ತಕ್ಷಣವೇ ಆರೋಪಿ 1 ರವರು ಬಾಗಿಲು ತೆಗೆದು ಏಕಾಏಕಿ ನನಗೆ ಕೈಯಿಂದ ನನ್ನ ಕೈಗೆ, ತಲೆಗೆ ಹಾಗೂ ಕೆನ್ನೆಗೆ ಹೊಡೆದು ಗಂಟಲನ್ನು ಹಿಡಿದುಕೊಂಡು ಎದೆಗೆ ಕೈಯಿಂದ ಗುದ್ದಿರುತ್ತಾರೆ ಎಂದರೆ ಸರಿಯಲ್ಲ. ಆಗ ಉಳಿದ ಆರೋಪಿತರು ಸಹ ನನ್ನನ್ನು ತಳ್ಳಾಡಿ ಹೊಡೆಯಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಗಳವನ್ನು ಚಾಸಾ-7 ಮತ್ತು ಚಾಸಾ-9 ರವರು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನಮ್ಮ ಕುಟುಂಬವನ್ನು ಚರ್ಚ್ ಒಳಗೆ ಸೇರಿಸಿದರೆ ಕೊಲೆ ಮಾಡುವುದಾಗಿ ಜೀವ ಬೆಧರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂಧ ನಾನು ನಿಪಿ-1 ರಂತೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2. ದಿ: 17.12.2025 ರಂದು ನಾನು ತೋರಿಸಿದ ಹರಾವರಿ ಗ್ರಾಮದ ಸರ್ವೆ ನಂ. 220 ರಲ್ಲಿರುವ ಅರ್ಧ ಎಕರೆ ಜಾಗಾದಲ್ಲಿರುವ ಕ್ರಿಶ್ಚಿಯನ್ ಸಮೂದಾಯಕ್ಕೆ ಸೇರಿದ ಸ್ಮಶಾನ ಹಾಗೂ ಸಂತ ಯೋಧರ ಚರ್ಚ್ ಪಕ್ಕದಲ್ಲಿರುವ ಧರ್ಮ ಗುರುಗಳ ನಿವಾಸದ ಮುಂಭಾಗದಲ್ಲಿ ದಿ: 16.12.2025 ರಂದು ಆರೋಪಿತರು ನನಗೆ ಮತ್ತು ನನ್ನ ತಂದೆಗೆ ಹೊಡಿಬಡಿ ಮಾಡಿ ನನ್ನ ಮಾನಕ್ಕೆ ಕುಂದು ಬರುವ ರೀತಿ ನಡೆದುಕೊಂಡ ಜಾಗ ಇದೇ ಎಂದು ನಾನು ತೋರಿಸಿದ ಜಾಗದಲ್ಲಿ ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ 2.30 ರವರೆಗೆ ಪೋಲಿಸರು ಕೃತ್ಯ ಸ್ಥಳದ ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ಸದರಿ ಮಹಜರ್ ಮಾಡುವ ಕಾಲಕ್ಕೆ ನಿಪಿ-3 ಮತ್ತು ನಿಪಿ-4 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ನಲ್ಲಿ ಬರೆದ ವಿಚಾರಗಳನ್ನು ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿ: 05.01.2026 ರಂದು ನಾನು ಕೊಪ್ಪ ಸಿವಿಲ್ ನ್ಯಾಯಾಲಯದಲ್ಲಿ ನಾನೇ ಸ್ವ-ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಹೇಳಿದ ಮೇರೆಗೆ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ.

3. ದಿ: 06.03.2026 ರಂದು ನಾನು ಪೋಲಿಸರ ಮುಂದೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿ: 16.12.2025 ರಂದು ನಾನು ದೂರು ಕೊಡುವ ಕಾಲಕ್ಕೆ ಏಕಾಏಕಿ ಸಂತೋಷ್ ಪಿಂಟೋ ನಮ್ಮ ತಂದೆಗೆ ಕೈಯಿಂದ ಹೊಡೆದು ನಂತರ ನನ್ನ ತಲೆಗೆ, ಕೆನ್ನೆಗೆ ಹೊಡೆದು ಗಂಟಲನ್ನು ಹಿಡಿದುಕೊಂಡು ಎದೆಗೆ ಕೈಯಿಂದ ಗುದ್ದಿದ್ದು ಉಳಿದ ಆರೋಪಿತರು ಕೆಟ್ಟ ಪದಗಳಿಂದ ಬೈದಿರುತ್ತಾರೆ ಎಂದು ಹೇಳಿದ್ದು ಆದರೆ ಧರ್ಮ ಗುರುಗಳು ರಾಜಿ ಮಾಡುವ ಕಾಲಕ್ಕೆ ನಮಗೂ ಮತ್ತು ಆರೋಪಿತರ ಕುಟುಂಬದವರಿಗೂ ಯಾವುದೇ ಕಾರಣಕ್ಕೂ ಚರ್ಚ್ ನ ಸಂಸ್ಕಾರ ಕೊಡಬಾರದು ಎಂದು ಹೇಳುತ್ತಿದ್ದರು ಅದಕ್ಕೆ ನಮ್ಮ ತಂದೆ ಯಾಕೆ ಕೊಡಬಾರದು ಎಂದು ಕೇಳಿದ್ದಕ್ಕೆ ಸದರಿ ಸಂತೋಷ್ ಪಿಂಟೋ ಏಕಾಏಕಿ ಕೋಪಗೊಂಡು ಧರ್ಮ ಗುರುಗಳ ಮನೆಯ ಮುಂಭಾಗದ ಪೋರ್ಟಿಕೋದ ಹತ್ತಿರ ನಿಂತಿದ್ದು, ನಮ್ಮ ತಂದೆಗೆ ಕೈಯಿಂದ ಹೊಡೆದು ನಂತರ ನನ್ನ ಬಳಿ ಬಂದು ನನ್ನ ತಲೆಗೆ, ಕೆನ್ನೆಗೆ ಹೊಡೆದು ಗಂಟಲನ್ನು ಹಿಡಿದುಕೊಂಡು ಎದೆಗೆ ಕೈಯಿಂದ ಗುದ್ದಿದ್ದು ಕೂಡಲೇ ಚಾಸಾ-8 ಮತ್ತು ಚಾಸಾ-9 ರವರು ಗಲಾಟೆ ಬಿಡಿಸಿದರು ಎಂದರೆ ಸರಿಯಲ್ಲ. ಆಗ

ಆರೋಪಿತರು ಎಲ್ಲರೂ ನನಗೆ ಮತ್ತು ನನ್ನ ತಂದೆಗೆ ಉದ್ದೇಶಿಸಿ ನೀವೇನಾದರು ಚಾಸಾ-5 ಮತ್ತು ಚಾಸಾ-6 ರವರನ್ನು ಚರ್ಚ್ ಒಳಗಡೆ ಸೇರಿಸಿಕೊಂಡರೆ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಈಗ ಓದಿ ಹೇಳಿದ ನಿಪಿ-6 ರಂತೆ ಮರುಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-6 ರಂತೆ ಮರುಹೇಳಿಕೆ ಕೊಟ್ಟಿದ್ದರು ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ನಮ್ಮ ತಂದೆಗೆ ಹೊಡಿ ಬಡಿ ಮಾಡಿ ನನ್ನ ಮಾನಕ್ಕೆ ಕುಂದು ಬರುವ ರೀತಿ ನಡೆದುಕೊಂಡು ಕೊಲೆ ಮಾಡುವುದಾಗಿ ಪ್ರಾಣ ಬೆಧರಿಕೆ ಹಾಕಿದ್ದರು ಸಹ ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ಸಂಬಂಧಿಕರಿದ್ದು ಹಾಗೂ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ಕಾರಣದಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ ಭಾವಚಿತ್ರ ತೆಗೆದಿದ್ದರು ಸಹ ಹಾಗೂ ನಿಪಿ-1 ರಂತೆ ದೂರು ಕೊಟ್ಟು ನಿಪಿ-6 ರಂತೆ ಮರುಹೇಳಿಕೆ ಕೊಟ್ಟಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ Sri. S.P. ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.</u>

ಮರುವಿಚಾರಣೆ :: ಇಲ್ಲ:

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ: